ಇಂದು ದಿ**: 20.06.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು **1** ಮತ್ತು **6** ರಿಂದ **9** ನೇ ಪ್ರತಿವಾದಿಗಳ ಪರಃಶ್ರೀ ಎಸ್ ಜಿ **.,**ವಕೀಲರಿಂದ**.**

ನಮ್ಮ ತಂದೆ ಹಾಲು ಮಾರಾಟವನ್ನು ಮಾಡುತ್ತಾರೆ. ನಮ್ಮ ತಂದೆ ತನ್ನ 20 ನೇ ವಯಸ್ಸಿನಿಂದ ಹಾಲು ಮಾರಾಟವನ್ನು ಮಾಡುತ್ತಿದ್ದಾನೆ. ಬೈಕಿನಲ್ಲಿ ನಮ್ಮ ತಂದೆ ಹಾಲನ್ನು ಮನೆಗೆ ಮತ್ತು ಅಂಗಡಿಗೆ ಹಾಕುತ್ತಾರೆ. ನಮ್ಮ ತಂದೆ ಬೈಕಿನಲ್ಲಿ ಓಡಾಡುತ್ತಿದ್ದ ಕಾರಣ, ಕಣ್ಣು, ಕಿವಿ ಮತ್ತು ಅರೋಗ್ಯವಾಗಿ ಇರುತ್ತಾರೆ ಎಂದರೆ ಸಾಕ್ಷಿ ನಮ್ಮತಂದಗೆ ಕಣ್ಣು ರಾತ್ರಿ ಕಾಣಿಸುವುದಿಲ್ಲ ಕಿವಿ ಸರಿಯಾಗಿ ಕೇಳಿಸುವುದಿಲ್ಲ ಎಂದು ಹೇಳುತ್ತಾರೆ. ನಮ್ಮ ತಂದೆ 6 ನೇತರಗತಿಯವರೆಗೆ ಓದಿರುತ್ತಾನೆ. ಕನ್ನಡ ಓದಲು ಬರೆಯಲು ಬರುತ್ತದೆ. ನಮ್ಮ ತಂದೆಗೆ ಬೆಳಗಿನ ಸಮಯದಲ್ಲಿ ಕಣ್ಣು ಸರಿಯಾಗಿ ಕಾಣಿಸುತ್ತಿದ್ದು, ರಾತ್ರಿ ಸರಿಯಾಗಿ ಕಾಣಿಸುವುದಿಲ್ಲ ಎನ್ನುವುದು ನಿಜ. ನಾನು ಜಿ ಪಿ ಎ ಮೂಲಕ ಸಾಕ್ಷಿ ಹೇಳಲು ಬಂದಿರುತ್ತೇನೆ. ನಮ್ಮ ತಂದೆ ಆರೋಗ್ಯದಿಂದ ಇರುವ ಕಾರಣ, ನನಗೆ ಜಿ ಪಿ ಎ ಕೊಡುವ ಅವಶ್ಯಕತೆ ಇಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ನ್ಯಾಯಾಲಯಕ್ಕೆ ಬಂದರೆ ಸತ್ಯ ಗೊತ್ತಾಗುತ್ತದೆ ಎನ್ನುವ ಕಾರಣ ನಾನೇ ಅವರಿಂದ ಜಿ ಪಿ ಎ ತೆಗೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಎಲ್ ಎಲ್ ಬಿ ಓದಿರುತ್ತೇನೆ. 2024 ರಲ್ಲಿ ನಾನು ಎಲ್ ಎಲ್ ಬಿ ಯನ್ನು ಪೂರ್ಣಗೊಳಿಸಿರುತ್ತೆನೆ. ಈಗ ನಾನು ಬೆಂಗಳೂರಿನಲ್ಲಿ ಹಿರಿಯ ವಕೀಲರ ಬಳಿ ಇದ್ದು ವಕಾಲತ್ತನ್ನು ಮಾಡುತ್ತಿದ್ದೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಕಣ್ತಪ್ಪಿನಿಂದಾಗಿ ವ್ಯವಸಾಯ ಮಾಡುತ್ತಿದ್ದೇನೆ ಎಂದು ಬರೆಸಿರುತ್ತೇನೆ. ಆಸ್ತಿಯಲ್ಲಿ ಭಾಗ ಬರಬೇಕು ಎನ್ನುವ ಸಲುವಾಗಿ ಸಾಕ್ಷಿ ಹೇಳಲು ಬಂದಿರುತ್ತೇನೆ. ನಮ್ಮ ಅಜ್ಜಿ ಪಾರ್ವತಮ್ಮ ಇವಳಿಗೆ ಬರಬೇಕಾದ ಆಸ್ತಿಯ ಸಲುವಾಗಿ ಸಾಕ್ಷಿ ಹೇಳಲು ಬಂದಿರುತ್ತೇನೆ. ನಮ್ಮ ಅಜ್ಜಿ ಪಾರ್ವತಮ್ಮ ಇವಳು ಪರಣ್ಣ ಇವನ ಮೊದಲನೇ ಮಗಳು. ಸದರಿ ಪರಣ್ಣ ಇವರ ತಂದೆಯ ಹೆಸರು ರುದ್ರಪ್ಪ. ಸದರಿ ರುದ್ರಪ್ಪನಿಗೆ ಸಿದ್ದಪ್ಪ, ಪರಣ್ಣ ಮತ್ತು ಮಲ್ಲಪ್ಪ ಎಂಬ ಮೂರು ಜನ ಮಕ್ಕಳು ಇರುತ್ತಾರೆ. ಸದರಿ ಮೂರು ಜನರು ಮೃತಪಟ್ಟಿರುತ್ತಾರೆ. ಅವರು ಯಾವಾಗ ಮೃತಪಟ್ಟಿರುತ್ತಾರೆ ಎಂದು ಗೊತ್ತಿರುವುದಿಲ್ಲ.

ರುದ್ರಪ್ಪನ ಮೊದಲನೇ ಮಗ ಸಿದ್ದಪ್ಪನಿಗೆ 6 ಜನ ಮಕ್ಕಳು, ಅವರು ಪಾರ್ವತಮ್ಮ, ಚನ್ನಮ್ಮ, ಪರಣ್ಣ, ಶಿವಣ್ಣ, ಮರುಳಸಿದ್ದಪ್ಪ ಮತ್ತು ಚಂದ್ರಪ್ಪ. ಸದರಿ 6 ಜನರು ಮೃತಪಟ್ಟಿರುತ್ತಾರೆ. ಸಿದ್ದಪ್ಪನ ಮಗಳು ಪಾರ್ವತಮ್ಮಳಿಗೆ 8 ಜನ ಮಕ್ಕಳು, ಅವರು ರಾಜಣ್ಣ, ಗೌರಮ್ಮ, ಮಲ್ಲಿಕಾರ್ಜುನ, ಧನಂಜಯ, ಮಂಜುಳಾ, ಪ್ರಭಾವತಿ, ಭಾಗ್ಯಮ್ಮ ಇನ್ನೊಬ್ಬರ ಹೆಸರು ನೆನಪು ಇರುವುದಿಲ್ಲ. ಅವರಲ್ಲಿ ರಾಜಣ್ಣ ಮತ್ತು ಧನಂಜಯ ಮೃತಪಟ್ಟಿರುತ್ತಾರೆ. ರಾಜಣ್ಣ

ಇವರ ವಾರಸುದಾರರು ಇರುತ್ತಾರೆ. ಅವರು ಹೇಮಲತಾ ಮತ್ತು ಕುಮಾರಸ್ವಾಮಿ ಮತ್ತು ಕುಸುಮ. ಅವರು ಎಲ್ಲಿ ವಾಸವಾಗಿರುತ್ತಾರೆ ಎನ್ನುವುದು ಗೊತ್ತಿರುವುದಿಲ್ಲ. ಧನಂಜಯ ಇವರ ವಾರಸುದಾರರು ಯಾರು ಎಂದು ನೆನಪು ಇರುವುದಿಲ್ಲ. ಸದರಿ ಧನಂಜಯ ಇವರ ವಾರಸುದಾರರು ಎಲ್ಲಿ ವಾಸವಾಗಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಪಾರ್ವತಮ್ಮ ಇವಳ ಉಳಿದ ಮಕ್ಕಳು ಎಲ್ಲೆಲ್ಲಿ ವಾಸವಾಗಿರುತ್ತಾರೆ ಎಂದು ನಿರ್ಧಿಷ್ಟವಾಗಿ ಹೇಳಲು ಆಗುವುದಿಲ್ಲ. ಸಿದ್ದಪ್ಪನ ಎರಡನೇ ಮಗಳು ಚೆನ್ನಮ್ಮ ಇವಳಿಗೆ ಇಬ್ಬರು ಮಕ್ಕಳು ಅವರು ಪಾರ್ವತಮ್ಮ ಮತ್ತು ಮಂಜುನಾಥ. ಸದರಿಯವರು ಮೃತಪಟ್ಟಿರುತ್ತಾರೆ. ಪಾರ್ವತಮ್ಮ ಇವಳ ವಾರಸುದಾರರು 4 ಜನ ಇರುತ್ತಾರೆ. ಅವರು ಉಮಾದೇವಿ, ಮರುಳಸಿದ್ದಪ್ಪ, ಉಮೇಶ ಮತ್ತು ಮಮತಾ. ಅವರೆಲ್ಲರೂ ಎಲ್ಲಿ ವಾಸವಾಗಿರುತ್ತಾರೆ ಮತ್ತು ಏನು ಕೆಲಸ ಮಾಡುತ್ತಾರೆ ಎನ್ನುವುದು ಗೊತ್ತಿರುವುದಿಲ್ಲ. ಚೆನ್ನಮ್ಮನ ಮಗ ಮಂಜುನಾಥ ಇವನ ವಾರಸುದಾರರು ಇಂದ್ರಮ್ಮ ಹೆಂಡತಿಯಿದ್ದು, ಇಬ್ಬರು ಮಕ್ಕಳು ಇರುತ್ತಾರೆ, ಆದರೆ ಅವರ ಹೆಸರು ನೆನಪು ಇರುವುದಿಲ್ಲ. ಅವರು ಎಲ್ಲಿ ವಾಸವಾಗಿರುತ್ತಾರೆ ಮತ್ತು ಏನು ಕೆಲಸ ಮಾಡುತ್ತಾರೆ ಎಂದು ಗೊತ್ತಿರುವುದಿಲ್ಲ.

ಸಿದ್ದಪ್ಪನ ಮೂರನೇ ಮಗ ಪರಣ್ಣ ಇವನಿಗೆ 5 ಜನ ಮಕ್ಕಳು ಇರುತ್ತಾರೆ. ಹೆಂಡತಿ ಶಿವರುದ್ರಮ್ಮ ಮಕ್ಕಳು, ಪಾರ್ವತಮ್ಮ, ಉಮಾದೇವಿ, ರಾಜೇಶ್ವರಿ, ಮುರುಗೇಶ್ ಮತ್ತು ಜ್ಯೋತಿಲಕ್ಷ್ಮಿ. ಸದರಿಯವರು ಎಲ್ಲಿ ವಾಸವಾಗಿರುತ್ತಾರೆ ಮತ್ತು ಏನು ಕೆಲಸ ಮಾಡುತ್ತಾರೆ ಎನ್ನುವುದು ಗೊತ್ತಿರುದಿಲ್ಲ.

ಸಿದ್ದಪ್ಪನ 4 ನೇ ಮಗ ಶಿವಣ್ಣ ಮೃತಪಟ್ಟಿರುತ್ತಾರೆ. ಸದರಿ ಶಿವಣ್ಣನಿಗೆ 5 ಜನ ಮಕ್ಕಳು ಇರುತ್ತಾರೆ. ಅವರು ಮರುಳಸಿದ್ದಮ್ಮ, ಗಿರಿಜಮ್ಮ, ಶೀಲಾ , ಮುರಗೇಶ್ ಮತ್ತು ಶಿವಪ್ರಕಾಶ್. ಶಿವಪ್ರಕಾಶ್ ಬೆಂಗಳೂರಿನಲ್ಲಿ ವಾಸವಾಗಿದ್ದು, ಅವರು ವೈದ್ಯಕೀಯ ಕೆಲಸ ಮಾಡುತ್ತಿದ್ದಾರೆ. ಉಳಿದವರು ಎಲ್ಲಿ ವಾಸವಾಗಿರುತ್ತಾರೆ ಮತ್ತು ಏನು ಕೆಲಸ ಮಾಡುತ್ತಾರೆ ಎನ್ನುವುದು ಗೊತ್ತಿರುದಿಲ್ಲ.

ಸಿದ್ದಪ್ಪನ 5 ನೇ ಮಗ ಮರುಳಸಿದ್ದಪ್ಪನಿಗೆ ಇಬ್ಬರು ಹೆಂಡತಿಯರು, ಅವರು ಗೌರಮ್ಮ ಮತ್ತು ಶಾರದಮ್ಮ. ಸದರಿಯವರು ಮೃತಪಟ್ಟಿರುತ್ತಾರೆ. ಅವರ ಮಕ್ಕಳು ತಿಪ್ಪೆಸ್ವಾಮಿ. ಸದರಿ ತಿಪ್ಪೆಸ್ವಾಮಿ ಗೌರಮ್ಮನ ಮಗ. ಶಾರದಮ್ಮ ಇವಳಿಗೆ 4 ಜನ ಮಕ್ಕಳು, ಅವರು ಬಸವರಾಜಪ್ಪ, ವೀರೇಶ್ ಬಾಬು, ಇನ್ನು ಇಬ್ಬರ ಹೆಸರು ನೆನಪು ಇರುವುದಿಲ್ಲ. ಸದರಿಯವರು ಎಲ್ಲಿ ವಾಸವಾಗಿರುತ್ತಾರೆ ಮತ್ತು ಏನು ಕೆಲಸ ಮಾಡುತ್ತಾರೆ ಎನ್ನುವುದು ಗೊತ್ತಿರುದಿಲ್ಲ.

ಸಿದ್ದಪ್ಪನ 6 ನೇ ಮಗ ಚಂದ್ರಪ್ಪ ಮೃತಪಟ್ಟಿರುತ್ತಾನೆ. ಸದರಿ ಚಂದ್ರಪ್ಪನ ಹೆಂಡತಿ ಪಾರ್ವತಮ್ಮ, ಮಕ್ಕಳು ಉಮಾದೇವಿ, ಮರುಳಸಿದ್ದಪ್ಪ, ಉಮೇಶ ಮತ್ತು ಮಮತಾ. ಸದರಿಯವರು ಎಲ್ಲಿ ವಾಸವಾಗಿರುತ್ತಾರೆ ಮತ್ತು ಏನು ಕೆಲಸ ಮಾಡುತ್ತಾರೆ ಎನ್ನುವುದು ಗೊತ್ತಿರುದಿಲ್ಲ.

ಸಿದ್ದಪ್ಪನ 6 ಜನ ಮಕ್ಕಳು ಯಾವಾಗ ಮೃತಪಟ್ಟಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಸಿದ್ದಪ್ಪನ ಸಹೋದರ ಪರಣ್ಣ ಇವನಿಗೆ 7 ಜನ ಮಕ್ಕಳು ಇರುತ್ತಾರೆ. ಅವರು ಪಾರ್ವತಮ್ಮ, ಗಂಗಮ್ಮ, ಗಂಗಾಧರಪ್ಪ, ಶಿವರುದ್ರಪ್ಪ, ಶೇಖರಪ್ಪ, ಮಹೇಶ್ವರಪ್ಪ ಮತ್ತು ಪ್ರಕಾಶ. ಅವರಲ್ಲಿ ಶೇಖರಪ್ಪ, ಮಹೇಶ್ವರಪ್ಪ ಮತ್ತು ಪ್ರಕಾಶ ಜೀವಂತ ಇರುತ್ತಾರೆ. ಪಾರ್ವತಮ್ಮ ಇವಳು 2022 ರಲ್ಲಿ ಮೃತಪಟ್ಟಿರುತ್ತಾಳೆ. ಗಂಗಮ್ಮ 2019 ರಲ್ಲಿ ಮೃತಪಟ್ಟಿರುತ್ತಾಳೆ. ಗಂಗಾಧರಪ್ಪ ಮತ್ತು ಶಿವರುದ್ರಪ್ಪ ಯಾವಾಗ ಮೃತಪಟ್ಟಿರುತ್ತಾರೆ ಎಂದು ಗೊತ್ತಿರುವುದಿಲ್ಲ. ನಮ್ಮ ಅಜ್ಜಿ ಪಾರ್ವತಮ್ಮ ಇವಳಿಗೆ 4 ಜನ ಮಕ್ಕಳು, ಅವರು ರಮೇಶ, ಕುಮಾರಿ , ಸತೀಶ್ ಕುಮಾರ್ ಮತ್ತು ಗಿರೀಶ ಕುಮಾರ್. ರಮೇಶ ಇವನು ಚಿಕ್ಕನಿದ್ದಾಗಲೇ ಮೃತಪಟ್ಟಿರುತ್ತಾನೆ. ಸದರಿ ಕುಮಾರಿ ಇವಳಿಗೆ ಗಂಡ ಉಮೇಶ ಮಕ್ಕಳು ಲೋಕೇಶ ಮತ್ತು ಪ್ರದೀಪ. ಸದರಿ ಕುಮಾರಿ ಇವಳು ಯಾವಾಗ ಮೃತಪಟ್ಟಿರುತ್ತಾಳೆ ಎಂದು ಗೊತ್ತಿರುವುದಿಲ್ಲ.

ಪರಣ್ಣನ ಎರಡನೇ ಮಗಳು ಗಂಗಮ್ಮ ಇವಳ ಮಕ್ಕಳು 5 ಜನರು, ಅವರು ಪ್ರಕಾಶ, ಶಾಂತಕುಮಾರ, ಕಾಂತರಾಜ್, ಲಲಿತಮ್ಮ, ಜಗದೀಶ. ಅವರಲ್ಲಿ ಶಾಂತಕುಮಾರ್ ಮತ್ತು ಜಗದೀಶ್ ಮಾತ್ರ ಜೀವಂತ ಇರುತ್ತಾರೆ. ಪ್ರಕಾಶ ಮತ್ತು ಕಾಂತರಾಜ ಎಲ್ಲಿ ಯಾವಾಗ ಮೃತಪಟ್ಟಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಲಿಲತಮ್ಮ ಕೆಲ್ಲೋಡು ಗ್ರಾಮದಲ್ಲಿ 2022 ರಲ್ಲಿ ಮೃತಪಟ್ಟಿರುತ್ತಾಳೆ. ಪ್ರಕಾಶ ಇವರ ವಾರಸುದಾರರು ನೆನಪು ಇರುವುದಿಲ್ಲ. ಶಾಂತಕುಮಾರ್ ಇವನ ವಾರಸುದಾರರು ನೆನಪು ಇರುವುದಿಲ್ಲ. ಕಾಂತರಾಜ ಇವರ ಹೆಂಡತಿ ಮಕ್ಕಳು ಇರುತ್ತಾರೆ. ಹೆಂಡತಿ ರೂಪ ಮಕ್ಕಳು ಭವ್ಯ ಮತ್ತು ಪುನೀತ್. ಇವರು ತುಮಕೂರಿನಲ್ಲಿ ವಾಸವಾಗಿರುತ್ತಾರೆ. ಕಾಂತರಾಜ ಇವರು ಚಿರುಮುರಿ ವ್ಯಾಪಾರ ಮಾಡುತ್ತಿದ್ದ ಅವನು ಮೃತಪಟ್ಟ ನಂತರ ಅವರ ವಾರಸುದಾರರು ಏನು ಕೆಲಸ ಮಾಡುತ್ತಾರೆ ಎಂದು ಗೊತ್ತಿರುವುದಿಲ್ಲ.

ಲಲಿತಮ್ಮ ಇವಳ ಗಂಡ ಪ್ರಕಾಶ ಮಕ್ಕಳು ಇಬ್ಬರು ಅವರು ಮೋಹನ್ ಕುಮಾರ್ ಮತ್ತು

ಪವನ್ ಕುಮಾರ್. ಸದರಿ ಪ್ರಕಾಶ ಚುರುಮುರಿ ವ್ಯಾಪಾರ ಮಾಡುತ್ತಾನೆ ಮಕ್ಕಳು ಏನು ಕೆಲಸ ಮಾಡುತ್ತಾರೆ ಎಂದು ಗೊತ್ತಿರುವುದಿಲ್ಲ.

ಪರಣ್ಣ ಇವನ ಮೂರನೇ ಮಗ ಗಂಗಾಧರಪ್ಪ, ಇವನ ವಾರಸುದಾರರು ಹೆಂಡತಿ ಸುವರ್ಣಮ್ಮ ಮಕ್ಕಳು ರಾಜಪ್ಪ, ಪ್ರಸನ್ನ, ಭಾರತಿ ಮತ್ತು ಮಂಜುನಾಥ. ಸದರಿ ರಾಜಪ್ಪ ಇವನು ವ್ಯವಸಾಯ ಮಾಡುತ್ತಾನೆ. ಪ್ರಸನ್ನ ಕುಮಾರ್ ಇವನು ಕೆಲ್ಲೋಡು ಗ್ರಾಮದಲ್ಲಿ ಇದ್ದು ವ್ಯವಸಾಯ ಮಾಡುತ್ತಾನೆ. ಭಾರತಿ ಇವಳು ಕೂನಬೇವು ಗ್ರಾಮದಲ್ಲಿ ಇರುತ್ತಾಳೆ. ಅವಳ ಗಂಡನ ಹೆಸರು ಗೊತ್ತಿರುವುದಿಲ್ಲ. ಅವಳ ಮದುವೆಯನ್ನು ಎಲ್ಲಿ ಮತ್ತು ಯಾವಾಗ ಮಾಡಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಮಂಜುನಾಥ ಇವನು ಟೀ ಅಂಗಡಿಯನ್ನು ಇಟ್ಟುಕೊಂಡಿರುತ್ತಾನೆ.

ಪರಣ್ಣ ಇವನ 4 ನೇ ಮಗ ಶಿವರುದ್ರಪ್ಪ ಯಾವಾಗ ಮೃತಪಟ್ಟಿರುತ್ತಾನೆ ಎಂದು ಗೊತ್ತಿರುವುದಿಲ್ಲ. ಸದರಿ ಶಿವರುದ್ರಪ್ಪನ ವಾರಸುದಾರರು ಹೆಂಡತಿ ಸುಶೀಲಮ್ಮ, ಮಕ್ಕಳು 3 ಜನ ಅವರು ಮಂಜುನಾಥ, ಸುವರ್ಣಮ್ಮ ಮತ್ತು ಕಲಾವತಿ. ಸದರಿ ಮಂಜುನಾಥ ಇವನು ಕೆಲ್ಲೋಡು ಗ್ರಾಮದಲ್ಲಿ ವ್ಯವಸಾಯ ಮಾಡುತ್ತಾನೆ. ಸುವರ್ಣಮ್ಮ ಎಲ್ಲಿ, ಯಾರೊಂದಿಗೆ ಇರುತ್ತಾಳೆ ಮತ್ತು ಏನು ಕೆಲಸ ಮಾಡುತ್ತಾಳೆ ಎನ್ನುವುದು ಗೊತ್ತಿರುವುದಿಲ್ಲ. ಕಲಾವತಿಯ ಬಗ್ಗೆ ಗೊತ್ತಿರುವುದಿಲ್ಲ.

ಪರಣ್ಣ ಇವನ 5 ನೇ ಮಗ ಶೇಖರಪ್ಪ ಇವನು ಜೀವಂತ ಇದ್ದು ಅವನು ವ್ಯವಸಾಯ ಮಾಡುತ್ತಾನೆ. ಸದರಿ ಶೇಖರಪ್ಪನ ಹೆಂಡತಿ ಮೃತಪಟ್ಟಿರುತ್ತಾಳೆ. ಅವರ ಮಕ್ಕಳು ರತ್ನಮ್ಮ, ಪಾರ್ವತಿ, ಮಂಜುಳಾ, ಸವಿತಾ ಮತ್ತು ಪ್ರಭು. ಅವರಲ್ಲಿ ರತ್ನಮ್ಮ ಐಮಂಗಳ ಗ್ರಾಮದಲ್ಲಿ ವಾಸವಾಗಿರುತ್ತಾಳೆ. ಪಾರ್ವತಿ ಬೆಂಗಳೂರಿನಲ್ಲಿ ವಾಸವಾಗಿರುತ್ತಾಳೆ. ಮಂಜುಳಾ ಇವಳು ಶಿರಾದಲ್ಲಿ ವಾಸವಾಗಿರುತ್ತಾಳೆ. ಸವಿತಾ ಬೆಂಗಳೂರಿನಲ್ಲಿ ವಾಸವಾಗಿರುತ್ತಾಳೆ. ಪ್ರಭು ಬೆಂಗಳೂರಿನಲ್ಲಿ ವಾಸವಾಗಿರುತ್ತಾನೆ. ನಮ್ಮ ತಾಯಿ ಮಂಜುಳಾ ಇವಳು ಶೇಖರಪ್ಪನ ಮಗಳು. ನಮ್ಮ ತಾಯಿಯನ್ನು ನಮ್ಮ ತಂದೆ ಗಿರೀಶ್ ಕುಮಾರ್ ಇವರಿಗೆ ಮದುವೆ ಮಾಡಿಕೊಟ್ಟಿರುತ್ತಾರೆ. ಮದುವೆಯಾದಾಗಿನಿಂದ ಶಿರಾದಲ್ಲಿ ವಾಸವಾಗಿರುತ್ತಾರೆ. ನಮ್ಮ ಅಜ್ಜಿ ಪಾರ್ವತಮ್ಮ ಇವಳ ಗಂಡ ಗುರುಸಿದ್ದಪ್ಪ. ಸದರಿ ಗುರುಸಿದ್ದಪ್ಪ ಮೃತಪಟ್ಟಿರುತ್ತಾನೆ. ಸದರಿ ಪಾರ್ವತಮ್ಮ ಇವಳು ಶಿರಾದಲ್ಲಿ ಎಷ್ಟು ವರ್ಷದಿಂದ ವಾಸವಾಗಿದ್ದಳು ಎಂದು ಗೊತ್ತಿರುವುದಿಲ್ಲ.

ಪರಣ್ಣನ 6 ನೇ ಮಗ ಮಹೇಶ್ವರಪ್ಪ ಇವನ ಹೆಂಡತಿ ಮತ್ತು ಮಕ್ಕಳ ಹೆಸರು ಗೊತ್ತಿರುವುದಿಲ್ಲ.

ಪರಣ್ಣನ 7 ನೇ ಮಗ ಪ್ರಕಾಶ್ ಇವನ ಹೆಂಡತಿ ಲಿಲತಮ್ಮ ಮತ್ತು ಮಕ್ಕಳು ಮೋಹನ್ ಕುಮಾರ್ ಮತ್ತು ಪವನ್ ಕುಮಾರ್.

ರುದ್ರಪ್ಪನ ಮೂರನೇ ಮಗ ಮಲ್ಲಪ್ಪ ಇವನಿಗೆ 6 ಜನ ಮಕ್ಕಳು ಇರುತ್ತಾರೆ. ಅವರು ಈರಮ್ಮ, ಶಿವಮ್ಮ, ಗೌರಮ್ಮ, ರುದ್ರಪ್ಪ, ಪಾರ್ವತಮ್ಮ ಮತ್ತು ಸಿದ್ದಮ್ಮ. ಅವರಲ್ಲಿ ಈರಮ್ಮ ಮತ್ತು ಶಿವಮ್ಮ ಮೃತಪಟ್ಟಿರುತ್ತಾರೆ. ಸದರಿ ಸಿದ್ದಮ್ಮ ಇವಳ ಕೆಲ್ಲೋಡು ಗ್ರಾಮದಲ್ಲಿ ಇರುತ್ತಾಳೆ. ಅವಳ ಗಂಡ ಮತ್ತು ಮಕ್ಕಳ ಹೆಸರು ಗೊತ್ತಿರುವುದಿಲ್ಲ. ಈರಮ್ಮ ಇವಳ ಗಂಡನ ಹೆಸರು ಗೊತ್ತಿರುವುದಿಲ್ಲ. ಮಕ್ಕಳು ಪರಮೇಶ ಮತ್ತು ಶಿವಮ್ಮ. ಸದರಿ ಪರಮೇಶ ಮೃತಪಟ್ಟಿರುತ್ತಾನೆ. ಶಿವಮ್ಮ ತರೀಕೆರೆಯಲ್ಲಿ ವಾಸವಾಗಿರುತ್ತಾಳೆ. ಗೌರಮ್ಮ ಇವಳ ಗಂಡ ಮತ್ತು ಮಕ್ಕಳು ಯಾರು, ಮತ್ತು ಅವರು ಏನು ಕೆಲಸ ಮಾಡುತ್ತಾರೆ ಎನ್ನುವುದು ಗೊತ್ತಿರುವುದಿಲ್ಲ. ಅವರು ಹೊಸದುರ್ಗದಲ್ಲಿ ಎಷ್ಟು ವರ್ಷದಿಂದ ವಾಸವಾಗಿರುತ್ತಾರೆ ಎನ್ನುವುದು ಗೊತ್ತಿರುದಿಲ್ಲ. ಪಾರ್ವತಮ್ಮ ಇವಳ ಗಂಡ ಮತ್ತು ಮಕ್ಕಳು ಯಾರು ಎಂದು ಗೊತ್ತಿರುವುದಿಲ್ಲ. ಅವರು ಲಕ್ಕಿಹಳ್ಳಿಯಲ್ಲಿ ವಾಸವಾಗಿರುತ್ತಾರೆ. ಸದರಿ ಲಕ್ಕಿಹಳ್ಳಿಯಲ್ಲಿ ಎಷ್ಟು ವರ್ಷದಿಂದ ವಾಸವಾಗಿರುತ್ತಾರೆ ಎಂದು ಗೊತ್ತಿರುವುದಿಲ್ಲ. ರುದ್ರಮ್ಮ ಇವಳು ಕೆಲ್ಲೋಡು ಗ್ರಾಮದಲ್ಲಿ ವಾಸವಾಗಿರುತ್ತಾಳೆ.

ಈ ದಾವೆಯನ್ನು ಶಿವರುದ್ರಪ್ಪ ಯಾರ ವಿರುದ್ಧ ಸಲ್ಲಿಸಿರುತ್ತಾರೆ ಎಂದು ಗೊತ್ತಿರುತ್ತದೆ. 2018 ರಲ್ಲಿ ದಾವೆಯನ್ನು ಸಲ್ಲಿಸಿದಾಗ ಹೆಣ್ಣು ಮಕ್ಕಳನ್ನು ಬಿಟ್ಟು ಗಂಡು ಮಕ್ಕಳ ವಾರಸುದಾರರನ್ನು ಪಕ್ಷಗಾರರನ್ನಾಗಿ ಮಾಡಿದ್ದರು. ಈ ದಾವೆಯನ್ನು 8-10 ಜನರ ಮೇಲೆ ಸಲ್ಲಿಸಿದ್ದರು. ಭಾಗ ಅಗಿಲ್ಲ ಎಂದು 2018 ರಲ್ಲಿ ದಾವೆಯನ್ನು ಸಲ್ಲಿಸಿದ್ದರು. ಸರ್ವೆ ನಂ. 38/2 ರಲ್ಲಿ 20 ಗುಂಟೆಗೆ ದಾವೆಯನ್ನು ಸಲ್ಲಿಸಿದ್ದರು. ಶಿವರುದ್ರಪ್ಪ ಮತ್ತು ಮುರಗೇಶ ಇವರು ಸಲ್ಲಿಸಿದ್ದರು. ಈ ಕೇಸನ್ನು 2018 ರಲ್ಲಿ ಸಲ್ಲಿಸಿದಾಗ ಮಾಹಿತಿ ಇರಲಿಲ್ಲ. ಈ ದಾವೆಯ ಬಗ್ಗೆ ನಮಗೆ 2021 ರಲ್ಲಿ ಮಾಹಿತಿ ತಿಳಿದಿರುತ್ತದೆ. ಆ ಸಮಯದಲ್ಲಿ ವಾದಿ ಮತ್ತು ಪ್ರತಿವಾದಿಗಳು ಭಾಗ ಕೊಡುತ್ತೇವೆ ಎಂದು ಹೇಳಿದ್ದರಿಂದ ನಮ್ಮ ಅಜ್ಜಿ ನ್ಯಾಯಾಲಯಕ್ಕೆ ಬಂದಿರಲಿಲ್ಲ. 2020 ರಲ್ಲಿ ನಮ್ಮ ಅಜ್ಜಿ ನನಗೆ ಭಾಗ ಕೊಡುತ್ತೇವೆ ಎಂದು ಹೇಳಿದ್ದರು ಎಂದು ನನಗೆ ಹೇಳಿರುತ್ತಾರೆ. ಅಣ್ಣತಮ್ಮಂದಿರು ಭಾಗ ಕೊಡುತ್ತೇವೆ ಎಂದು ಹೇಳಿದ್ದರು ಎಂದು ಮಾತ್ರ ಹೇಳಿರುತ್ತಾಳೆ ಆದರೆ

ಅವರ ಹೆಸರು ಹೇಳಿರುವುದಿಲ್ಲ. ನಮ್ಮ ಅಜ್ಜಿಗೆ ಯಾವ ವರ್ಷದಂದು ಭಾಗ ಕೊಡುತ್ತೇವೆ ಎಂದು ಹೇಳಿದ್ದರು ಎನ್ನುವುದನ್ನು ನನಗೆ ಹೇಳಿಲ್ಲ. ಸರ್ವೆ ನಂ. 38/2 ರಲ್ಲಿ 20 ಗುಂಟೆಯಲ್ಲಿ ಸಮವಾಗಿ ಎಷ್ಟು ಬರುತ್ತದೆ ಅಷ್ಟು ಮಾತ್ರ ಕೊಡುತ್ತೇವೆ ಎಂದು ಹೇಳಿದ್ದರು. ನಮ್ಮ ತಂದೆ ಈ ದಾವೆಗೆ ಸಂಬಂಧಪಟ್ಟಂತೆ ತಕರಾರನ್ನು ಸಲ್ಲಿಸಿರುತ್ತಾರೆ. ಸರ್ವೆ ನಂ. 38/2 ರಲ್ಲಿ 20 ಗುಂಟೆ ಮತ್ತು 38/1 ಎ ರಲ್ಲಿ 11 ಎಕರೆ 18 ಗುಂಟೆ, ಸರ್ವೆ ನಂ. 7/8 ರಲ್ಲಿ 6 ಎಕರೆ ಹಾಗೂ ಸರ್ವೆ ನಂ.16/1 ರಲ್ಲಿ 4 ಎಕರೆಗೆ ನಮ್ಮ ತಂದೆ ಮತ್ತು ನಮ್ಮ ದೊಡ್ಡಪ್ಪ ಎದುರು ಕ್ಲೆಂ ನ್ನು ಕೇಳಿರುತ್ತಾರೆ. ಸರ್ವೆ ನಂ.38/2 ಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ನೋಡಿರುತ್ತೇನೆ. ಸದರಿ ದಾಖಲೆಗಳು 1 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತವೆ. ಸದರಿ ಜಮೀನಿನ ಪಹಣಿಗಳನ್ನು ನಾನು ನೋಡಿರುತ್ತೇನೆ. ಆದರೆ, ಯಾವ ಇಸವಿಯ ಪಹಣಿ ಎಂದು ನೆನಪು ಇರುವುದಿಲ್ಲ. 2026 ಏಪ್ರಿಲ್, ಮೇ ತಿಂಗಳಲ್ಲಿ ನೋಡಿರುತ್ತೇನೆ.

1962 ರಲ್ಲಿ ರುದ್ರಪ್ಪನ ಮಕ್ಕಳು ಭಾಗ ಮಾಡಿಕೊಂಡು ಖಾತೆಯನ್ನು ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪಾಲು ವಿಭಾಗ ಪತ್ರದ ಮೂಲಕ ಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಅವರು ಸೃಷ್ಟಿಸಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಪಾಲುವಿಭಾಗ ಪತ್ರವನ್ನು ಸೃಷ್ಟಿ ಮಾಡಿರುತ್ತಾರೆ. ಮಲ್ಲಪ್ಪ, ಸಿದ್ದಪ್ಪ ಮತ್ತು ಪರಣ್ಣ ಇವರೆಲ್ಲರು ಸೇರಿ ಪಾಲುವಿಭಾಗ ಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ. 1962 ರಲ್ಲಿ ಸೃಷ್ಟಿ ಮಾಡಿರುತ್ತಾರೆ. ಸದರಿ ಪಾಲುವಿಭಾಗ ಪತ್ರ ಸೃಷ್ಟಿ ಅಗಿದೆ ನಾನೇ ಹೇಳುತ್ತಿದ್ದೇನೆ. ಸದರಿ ಪತ್ರ ಸೃಷ್ಟಿಯಾಗಿದೆ ಎಂದು 2026 ಏಪ್ರಿಲ್ ಮೇ ತಿಂಗಳಲ್ಲಿ ನನಗೆ ಗೊತ್ತಾಗಿರುತ್ತದೆ. ಪರಣ್ಣನ ಮಕ್ಕಳು ನಂತರ ಆಸ್ತಿಗಳನ್ನು ವಿಭಾಗ ಮಾಡಿಕೊಂಡು ಅವರವರ ಆಸ್ತಿಗಳನ್ನು ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ 7 ಎಕರೆ 14 ಗುಂಟೆಯನ್ನು ಉಳುಮೆ ಮಾಡುತ್ತಿದ್ದಾರೆ. ಸದರಿ 7 ಎಕರೆ 14 ಗುಂಟೆ 1 ನೇ ಪ್ರತಿವಾದಿಯ ಹೆಸರಿಗೆ ಇರುತ್ತದೆ. ಪರಣ್ಣನ ಮಕ್ಕಳು ಗಂಗಾಧರಪ್ಪ 30 ಗುಂಟೆ, 7/8 ರಲ್ಲಿ 6 ಎಕರೆಯನ್ನು ಅನುಭವಿಸುತ್ತಿದ್ದಾನೆ. 1 ನೇ ವಾದಿ ಸರ್ವೆ ನಂ. 38/1 ಎ ರಲ್ಲಿ 30 ಗುಂಟೆಯನ್ನು ಅನುಭವಿಸುತ್ತಿದ್ದಾನೆ. ಶೇಖರಪ್ಪ ಮಹೇಶ್ವರಪ್ಪ ಮತ್ತು ಪ್ರಕಾಶ ಇವರು ತಲಾ 30 ಗುಂಟೆಯನ್ನು ಸರ್ವೆ ನಂ. 38/1 ಎ ರಲ್ಲಿ ಅನುಭವಿಸುತ್ತಿದ್ದಾರೆ.ಸರ್ವೆ ನಂ. 38/2 ರಲ್ಲಿನ 20 ಗುಂಟೆಯನ್ನು ಶೇಖರಪ್ಪ, ಮಹೇಶ್ವರಪ್ಪ, ಪ್ರಕಾಶ, ಗಂಗಾಧರಪ್ಪ, ರುದ್ರಪ್ಪ ಮತ್ತು ಶಿವರುದ್ರಪ್ಪ ಅನುಭವಿಸುತ್ತಿದ್ದಾರೆ.

**ನಮ್ಮ ಮೂಲ ಪುರುಷ ರುದ್ರಪ್ಪ ಇವರಿ**ಗೆ ಒಟ್ಟು ಎಷ್ಟು ಆಸ್ತಿಗಳು ಇದ್ದವು ಎಂದು ನಮ್ಮ ಅಜ್ಜಿ ನನಗೆ ಹೇಳಿಲ್ಲ. ಸದರಿ ರುದ್ರಪ್ಪ ಇವರಿಗೆ ಒಟ್ಟು 14 ಎಕರೆ 20 ಗುಂಟೆ ಜಮೀನು ಹಾಗೂ ಹೊಸದುರ್ಗ ಟೌನ್ ನಲ್ಲಿ 100X40 ಅಡಿಯ ಕರೆ ಹಂಚಿನ ಮನೆ ಸಹಿತ ಖಾತೆ ನಿವೇಶನ ಇದ್ದು, ಅದನ್ನು ರುದ್ರಪ್ಪನ ಮಕ್ಕಳು 1930 ರಲ್ಲಿ ಪಾಲು ವಿಭಾಗ ಪತ್ರದ ಮೂಲಕ ಭಾಗ ಮಾಡಿಕೊಂಡಿದ್ದು,ಸದರಿ ಭಾಗದಲ್ಲಿ ಸಿದ್ದಪ್ಪನಿಗೆ ಮನೆ ಉಳಿದಂತಹ 14 ಎಕರೆ 20 ಗುಂಟೆ ಪರಣ್ಣ ಮತ್ತು ಮಲ್ಲಪ್ಪ ಇವರ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ನಂತರ ಪರಣ್ಣನ ಮಕ್ಕಳು 1985 ರಲ್ಲಿ ಅವರ ತಂದೆಯ ಭಾಗ ಕ್ಕೆ ಬಂದ ಆಸ್ತಿಗಳನ್ನು ಪಾಲು ವಿಭಾಗ ಪತ್ರದ ಮೂಲಕ ಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಷಯಗಳು ನಮ್ಮ ಅಜ್ಜಿಗೆ ಗೊತ್ತಿದ್ದ ಕಾರಣ, ಅವಳು ಯಾವುದೇ ತಕರಾರನ್ನು ಮಾಡದೇ ಇದ್ದರು ಸಹ ಅವಳು ಮೃತಪಟ್ಟ ನಂತರ ನಮ್ಮ ತಂದೆ ಮತ್ತು ನಮ್ಮ ದೊಡ್ಡಪ್ಪ ಸುಳ್ಳು ಎದುರು ಕ್ಲೇಂ ನ್ನು ಕೇಳಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.